ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ

## ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿ

# ಜಿ.ಬಿ.-7, ಜಿಲ್ಲಾಡಳಿತ ಭವನ, ಪಟ್ರೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ.

**Email ID: dhochikballapur@gmail.com.** **Phone & Fax: 08156-277040**

ಸಂಖ್ಯೆ:ಆರ್‌ಸಿಹೆಚ್/ಚಿಪುರ/ಎನ್.ಹೆಚ್.ಎಂ/ನೇಮಕಾತಿ-3/84/2023-24. ದಿನಾಂಕ:- 18-01-2024

## ::ಅಧಿಸೂಚನೆ::

ವಿಷಯ: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 2023-24ನೇ ಸಾಲಿನ ಆರ್.ಓ.ಪಿ ಅಡಿಯಲ್ಲಿ ಅನುಮೋದನೆಯಾಗುವ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳನ್ನು ಆನ್‌ಲೈನ್ ಮೂಲಕ ಭರ್ತಿಮಾಡುವ ಬಗ್ಗೆ.

ಉಲ್ಲೇಖ:
1. ಮಾನ್ಯ ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು ರವರ ತಿದ್ದುಪಡಿ ಸುತ್ತೋಲೆ ಪತ್ರದ ಸಂಖ್ಯೆ: NHM/SPMU/HR/152/2014-15. ದಿನಾಂಕ: 30/03/2023.
2. 2023-24ನೇ ಸಾಲಿನ ಆರ್.ಓ.ಪಿ ಅನುಮೋದನೆಯಂತೆ.
3. ಮುಖ್ಯ ಆಡಳಿತಾಧಿಕಾರಿಗಳು ಎನ್.ಹೆಚ್.ಎಂ ಬೆಂಗಳೂರು ರವರ ಪತ್ರದ ಸಂಖ್ಯೆ:NHM/SPMU/HR/Salary/104/2023-24 Date :20-11-2023 ರಂತೆ.
4. ದಿನಾಂಕ:13-12-2023ರಂದು ನಡೆದ ಕಾಯ್ದಿರಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ ನಡೆದ ಆಯ್ಕೆ ಸಮಿತಿಯ ನಡವಳಿ ಯಂತೆ.
5. ಈ ಕಛೇರಿಯ ಕಡತದ ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ರವರ ಕಡತದ ಕಂಡಿಕೆ(64) ಮತ್ತು (67)ರ ಅನುಮೋದನೆಯಂತೆ.

* * * * *

ಚಿಕ್ಕಬಳ್ಳಾಪುರ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಉಲ್ಲೇಖಗಳನ್ವಯ ಮಾನ್ಯ ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ) ರವರ ಸುತ್ತೋಲೆ ಪತ್ರ ದನ್ವಯ (31/03/2024ರ ಅಂತ್ಯ ದವರೆಗೆ) ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಖಾಲಿಯಿರುವ ವೈದ್ಯಕೀಯ ಹಾಗೂ ವೈದ್ಯೇತರ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ಆನ್‌ಲೈನ್ ಮೂಲಕ ನಿಯಮಾನುಸಾರ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ವಿಶೇಷ ಸೂಚನೆಗಳು:**

- ದಿನಾಂಕ:19/01/2024 ರಿಂದ 29/01/2024ರ ಬೆಳಗ್ಗೆ 11:00 ಗಂಟೆಯೊಳಗಾಗಿ https://chikkaballapur.nic.in ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆದು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
- ಕೆಳಕಂಡ ಹುದ್ದೆಗಳಿಗೆ (ತಜ್ಞ ವೈದ್ಯರು/ ವೈದ್ಯರು ಹೊರತುಪಡಿಸಿ) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿದ್ದು, ಕಿಯೋನಿಕ್ಸ್ ಸಂಸ್ಥೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.
- ಕ್ರಮ ಸಂಖ್ಯೆ (1-04)ರಲ್ಲಿನ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ದಿನಾಂಕ:30/01/2024 ರಂದು ಹಾಗೂ ಮೂಲ ದಾಖಲಾತಿಗಳು ಹಾಗೂ ಒಂದು ಸೆಟ್ ಜೆರಾಕ್ಸ್ (ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಆಧಾರ್ ಜೆರಾಕ್ಸ್ ಪ್ರತಿ, ಕಂಪ್ಯೂಟರ್ ಸಾಕ್ಷರತಾ ಪ್ರಮಾಣ ಪತ್ರ, ಜನ್ಮ ದಿನಾಂಕ ದೃಢೀಕರಣ ಪ್ರತಿ {ಎಸ್.ಎಸ್.ಎಲ್.ಸಿ ಅಂಕ ಪಟ್ಟಿ} ಮತ್ತು ವಿಳಾಸ ದೃಢೀಕರಣ ಪತ್ರ ಒಳಗೊಂಡಂತೆ) ಪ್ರತಿಗಳೊಂದಿಗೆ ಬೆಳಿಗ್ಗೆ 10.30ಕ್ಕೆ ಪರಿಶೀಲನೆಗೆ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಗೆ ಹಾಜರಾಗತಕ್ಕದ್ದು. ಸಂಜೆ 5 ಗಂಟೆ ನಂತರ ಬಂದಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.
- ಕ್ರಮ ಸಂಖ್ಯೆ (05)ರಲ್ಲಿನ ಶುಶ್ರೂಷಣಾಧಿಕಾರಿಗಳ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ದಿನಾಂಕ:31/01/2024 ರಂದು ಹಾಗೂ ಮೂಲ ದಾಖಲಾತಿಗಳು ಹಾಗೂ ಒಂದು ಸೆಟ್ ಜೆರಾಕ್ಸ್ (ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಆಧಾರ್ ಜೆರಾಕ್ಸ್ ಪ್ರತಿ, ಕಂಪ್ಯೂಟರ್ ಸಾಕ್ಷರತಾ ಪ್ರಮಾಣ ಪತ್ರ, ಜನ್ಮ ದಿನಾಂಕ ದೃಢೀಕರಣ ಪ್ರತಿ {ಎಸ್.ಎಸ್.ಎಲ್.ಸಿ ಅಂಕ ಪಟ್ಟಿ} ಮತ್ತು ವಿಳಾಸ ದೃಢೀಕರಣ ಪತ್ರ ಒಳಗೊಂಡಂತೆ) ಪ್ರತಿಗಳೊಂದಿಗೆ ಬೆಳಿಗ್ಗೆ 10.30ಕ್ಕೆ ಪರಿಶೀಲನೆಗೆ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಗೆ ಹಾಜರಾಗತಕ್ಕದ್ದು. ಸಂಜೆ 5 ಗಂಟೆ ನಂತರ ಬಂದಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.
- ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಇಲಾಖೆ ವತಿಯಿಂದ ಯಾವುದೇ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ನೀಡಲಾಗುವುದಿಲ್ಲ.

| Sl.N | Post | FMR Code& Salary as per ROP 2023-24 | Qualification | Vacant |
|---|---|---|---|---|
| 01 | RBSK Ayush MO | B.30.7.1.a / 8.1.7.1.a Rs. 46,894/- | ವೈದ್ಯಾಧಿಕಾರಿಗಳು BAMS ಉತ್ತೀರ್ಣರಾಗಿ ಇಂಟರ್ನ್‌ಷಿಪ್‌ನ್ನು ಖಡ್ಡಾಯವಾಗಿ ಪೂರ್ಣಗೊಳಿಸಿರಬೇಕು. ಕೆ.ಎ.ಯು.ಪಿ.ಬಿ (ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ) ನೋಂದಣಿಯನ್ನು ಹೊಂದಿರತಕ್ಕದ್ದು. Age Limit: 45 Yrs. ಒಟ್ಟು 02ಹುದ್ದೆಗಳು ಹಿಂದಿನ ಅಧಿಸೂಚನೆಯ ಬ್ಯಾಕ್ ಲಾಗ್ ಹುದ್ದೆಗಳನ್ನು ಪರಿಗಣೀಸಲಾಗಿದೆ. | 02 |

| ಪ್ರವರ್ಗ | ಒಟ್ಟು ಹುದ್ದೆಗಳ ಸಂಖ್ಯೆ | ಸಾಮಾನ್ಯ | ಮಹಿಳಾ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತರು | ಅಂಗವಿಕಲ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ | 1 | 0 | 0 | 0 | 0 | 0 | 0 | 1 | 1 |

18/01/24

<table>
<tr><td></td><td></td><td></td><td>
<table>
<tr><td>ಪರಿಶಿಷ್ಟ ಜಾತಿ</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪರಿಶಿಷ್ಟ ಪಂಗಡ</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–I</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–II (ಎ)</td><td>1</td><td>0</td><td>1</td><td>0</td><td>0</td><td>0</td><td>0</td><td>0</td><td>1</td></tr>
<tr><td>ಪ್ರವರ್ಗ–II (ಬಿ)</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–III (ಎ)</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–III (ಬಿ)</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಒಟ್ಟು</td><td>2</td><td>0</td><td>1</td><td>0</td><td>0</td><td>0</td><td>0</td><td>1</td><td>2</td></tr>
</table>
</td><td></td></tr>
<tr><td>02</td><td>RBSK Ophthalmic Assistant</td><td>B.30.7.1.e/8.1.7.1.e<br>Zone IV<br>Rs. 13,784 /- + EPF 13%</td><td>1. ಎರಡು ವರ್ಷದ Diploma in Optometry ಅಥವ ನೇತ್ರ ಸಹಾಯಕರು (Ophthalmic Assistant) ಆಗಿ ಮಾನ್ಯತೆ ಪಡೆದ ಸರ್ಕಾರಿ ಆಸ್ಪತ್ರೆಗಳಲ್ಲಿ NPCB ನಿಯಮಾನುಸಾರ ತರಬೇತಿ ಪಡೆದಿರಬೇಕು.<br>2. Computer (MS World , MS Excel, Power Point) ಮತ್ತು Internet ಇತ್ಯಾದಿಗಳ ಬಳಕೆಗೆ ಬೇಕಾಗುವ Computer Basic Course ನಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು.<br>3. ಒಂದೇ ಹುದ್ದೆ ಆಗಿರುವುದರಿಂದ ಮೇರಿಟ್ ಆಧಾರದಲ್ಲಿ ಆಯ್ಕೆ ಮಾಡಲಾಗುವುದು.<br>4. Age Limit: 45 Yrs.</td><td>01</td></tr>
<tr><td>03</td><td>District Epidemiologist</td><td>16.4.2.2.2<br>Rs.30,000/-</td><td>Medical Graduate with Post Graduate Degree / Diploma in preventive & Social Medicine / Public Health or Epidemiology (Such as MD, MPH, DPH, MAE etc.) or Any Medical Graduate with 2 years' experience in Public Health or MSc in Life Science with 2 Years MPH (Masters in Public Health) or MSc (Epidemiology) with 2 Years experience in Public Health.<br>ಒಂದೇ ಹುದ್ದೆ ಆಗಿರುವುದರಿಂದ ಮೇರಿಟ್ ಆಧಾರದಲ್ಲಿ ಆಯ್ಕೆ ಮಾಡಲಾಗುವುದು. Age Limit: 40 Yrs.</td><td>01</td></tr>
<tr><td>04</td><td>Taluk General Hospital Epidemiologist</td><td>16.4.2.2.2<br>Rs.30,000/-</td><td>Medical Graduate with Post Graduate Degree / Diploma in preventive & Social Medicine / Public Health or Epidemiology (Such as MD, MPH, DPH, MAE etc.) or Any Medical Graduate with 1 years' experience in Public Health/ (Desirable) or MSc in Life Science with 2 Years MPH (Masters in Public Health) or MSc (Epidemiology) with 2 Years experience in Public Health (Desirable). Age Limit: 40 Yrs.
<table>
<tr><th>ಪ್ರವರ್ಗ</th><th>ಒಟ್ಟು ಹುದ್ದೆಗಳ ಸಂಖ್ಯೆ</th><th>ಸಾಮಾನ್ಯ</th><th>ಮಹಿಳಾ</th><th>ಗ್ರಾಮೀಣ</th><th>ಮಾಜಿ ಸೈನಿಕ</th><th>ಕನ್ನಡ ಮಾಧ್ಯಮ</th><th>ಯೋಜನಾ ನಿರಾಶ್ರಿತರು</th><th>ಅಂಗವಿಕಲ</th><th>ಒಟ್ಟು</th></tr>
<tr><td>ಸಾಮಾನ್ಯ ಅಭ್ಯರ್ಥಿ</td><td>2</td><td>1</td><td>1</td><td>0</td><td>0</td><td>0</td><td>0</td><td>0</td><td>2</td></tr>
<tr><td>ಪರಿಶಿಷ್ಟ ಜಾತಿ</td><td>1</td><td>1</td><td>0</td><td>0</td><td>0</td><td>0</td><td>0</td><td>0</td><td>1</td></tr>
<tr><td>ಪರಿಶಿಷ್ಟ ಪಂಗಡ</td><td>1</td><td>1</td><td>0</td><td>0</td><td>0</td><td>0</td><td>0</td><td>0</td><td>1</td></tr>
<tr><td>ಪ್ರವರ್ಗ–1</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–II (ಎ)</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–II (ಬಿ)</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–III (ಎ)</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–III (ಬಿ)</td><td>0</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಒಟ್ಟು</td><td>4</td><td>3</td><td>1</td><td>0</td><td>0</td><td>0</td><td>0</td><td>0</td><td>4</td></tr>
</table>
</td><td>04</td></tr>
<tr><td>05</td><td>Staff Nurse (ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ)</td><td>B.30.1.2/8.1.1.2<br>(Zone-3 ರೂ. 15,554/-)<br>(Zone-4 ರೂ.14,186/– + EPF 13%)</td><td>GNM Qualification as recognized by Nursing Council of India with Karnataka Nursing Council Registration 2 Years' Experience of Working in a Hospital, Age limit: 45 yrs. ಒಟ್ಟು 10 ಹುದ್ದೆಗಳು ಹಿಂದಿನ ಅಧಿಸೂಚನೆಯ ಬ್ಯಾಕ್ ಲಾಗ್ ಹುದ್ದೆಗಳು ಹಾಗೂ 02 ಹುದ್ದೆಗಳು ಮೀಸಲಾತಿ ಬಿಂದು 45ರ ಬಿಂದು ಪ್ರವರ್ಗ–II(ಎ) ಮಹಿಳಾ ಅಭ್ಯರ್ಥಿ ಹಾಗೂ 46ರ ಬಿಂದು ಪರಿಶಿಷ್ಟ ಜಾತಿ ಗ್ರಾಮೀಣ ಅಭ್ಯರ್ಥಿ ಪರಿಗಣಿಸಲಾಗಿದೆ. ಉಲ್ಲೇಖ(3)ರ ಅನ್ವಯ ಶುಶ್ರೂಷಣಾಧಿಕಾರಿಗಳಿಗೆ ಮಾಸಿಕ ಸಂಚಿತ ವೇತನ Zone-4 ಕನಿಷ್ಠ ವೇತನ ರೂ.14,186/–ಗಳಿಗೆ ಅರ್ಹರಾಗಿದ್ದು, ಮತ್ತು Zone-3 ಕನಿಷ್ಠ ವೇತನ ರೂ. 15,554/–ಗಳಿಗೆ ಅರ್ಹರಾಗಿರುತ್ತಾರೆ.
<table>
<tr><th>ಪ್ರವರ್ಗ</th><th>ಒಟ್ಟು ಹುದ್ದೆಗಳ ಸಂಖ್ಯೆ</th><th>ಸಾಮಾನ್ಯ</th><th>ಗ್ರಾಮೀಣ</th><th>ಮಾಜಿ ಸೈನಿಕ</th><th>ಕನ್ನಡ ಮಾಧ್ಯಮ</th><th>ಯೋಜನಾ ನಿರಾಶ್ರಿತರು</th><th>ಅಂಗವಿಕಲ</th><th>ಒಟ್ಟು</th></tr>
<tr><td>ಸಾಮಾನ್ಯ ಅಭ್ಯರ್ಥಿ</td><td>3</td><td>1</td><td>0</td><td>0</td><td>0</td><td>0</td><td>2</td><td>3</td></tr>
<tr><td>ಪರಿಶಿಷ್ಟ ಜಾತಿ</td><td>3</td><td>2</td><td>1</td><td>0</td><td>0</td><td>0</td><td>0</td><td>3</td></tr>
<tr><td>ಪರಿಶಿಷ್ಟ ಪಂಗಡ</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–1</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–11 (ಎ)</td><td>4</td><td>2</td><td>1</td><td>0</td><td>0</td><td>1</td><td>0</td><td>4</td></tr>
<tr><td>ಪ್ರವರ್ಗ–11 (ಬಿ)</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–111 (ಎ)</td><td>0</td><td>0</td><td>0</td><td>0</td><td>0</td><td>0</td><td>0</td><td>0</td></tr>
<tr><td>ಪ್ರವರ್ಗ–111 (ಬಿ)</td><td>2</td><td>1</td><td>1</td><td>0</td><td>0</td><td>0</td><td>0</td><td>2</td></tr>
<tr><td>ಒಟ್ಟು</td><td>12</td><td>6</td><td>3</td><td>0</td><td>0</td><td>1</td><td>2</td><td>12</td></tr>
</table>
</td><td>10+2<br>=12</td></tr>
</table>

18/01/22.

ಷರತ್ತು & ನಿಬಂಧನೆಗಳು

- ಈ ನೇಮಕಾತಿಯು ಎನ್.ಹೆಚ್.ಎಂ / ಎನ್.ಯು.ಹೆಚ್.ಎಂ / ರಾಜ್ಯ ವಲಯದ ನಿಯಮಾವಳಿ, ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
- ಈ ಮೇಲ್ಕಂಡ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಚಾಲ್ತಿ ಇರುವ ಸರ್ಕಾರದ ಕಾಲಕಾಲಕ್ಕೆ ಬದಲಾಗುವ ನಿಯಮಗಳಂತೆ ನೇಮಕಾತಿ ಮಾಡಲಾಗುವುದು.
- ಈಗಾಗಲೇ ಕೋವಿಡ್-19 ಅಡಿಯಲ್ಲಿ ಕರ್ತವ್ಯ ನಿರ್ವಹಿಸಿ, ವಿಮುಕ್ತಿಗೊಂಡಿರುವ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ಇದ್ದು, ಸಮಿತಿಯ ತೀರ್ಮಾನದಂತೆ ನೇಮಕಾತಿ ಮಾಡಲಾಗುವುದು.
- ಹುದ್ದೆಗಳನ್ನು ಮೆರಿಟ್ ಕಮ್ ರೋಸ್ಟರ್ ಆಧಾರದಲ್ಲಿ ಭರ್ತಿ ಮಾಡಲಾಗುವುದು.
- 2023-24ನೇ ಸಾಲಿನ ಆರ್.ಓ.ಪಿ ಯಲ್ಲಿ ಹೊಸ ಹುದ್ದೆಗಳು ಮಂಜೂರಾದಲ್ಲಿ ಹಾಗೂ ಯಾವುದೇ ಹುದ್ದೆಗೆ ಅಗತ್ಯವಿರುವಷ್ಟು ಅಭ್ಯರ್ಥಿಗಳು ಅರ್ಜಿ ಸಲ್ಲಿಸದಿದ್ದಲ್ಲಿ ಅಥವಾ ಹೆಚ್ಚುವರಿ ಅರ್ಜಿಗಳನ್ನು ಸಲ್ಲಿಸಿರುವ ಅರ್ಜಿಗಳಲ್ಲಿ 31/03/2024ರ ಒಳಗೆ ಖಾಲಿಯಾಗುವ ಹುದ್ದೆಗಳನ್ನು Roll out Advertisement ಆಧಾರದಲ್ಲಿ ಭರ್ತಿ ಮಾಡಲಾಗುವುದು ಹಾಗೂ ಅರ್ಜಿ ಸ್ವೀಕೃತಿಯಾಗದೇ ಉಳಿದುಹೋಗುವ ಅಥವಾ ಖಾಲಿ ಇರುವ ಹುದ್ದೆಗಳಿಗೆ ಪ್ರತಿ ಸೋಮವಾರ ನೇರ ಸಂದರ್ಶನವನ್ನು ಆಯೋಜಿಸಲಾಗುವುದು. ಆಸಕ್ತಿ ಉಳ್ಳ ಅಭ್ಯರ್ಥಿಗಳು ಕಚೇರಿ ಸಮಯದಲ್ಲಿ ನೇರ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.
- ಮೀಸಲಾತಿ ಕೋರುವ ಅಭ್ಯರ್ಥಿಗಳು ಅದಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಸಂದರ್ಶನಕ್ಕೆ ಹಾಜರಾದ ದಿನದಂದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಹಾಗೂ ಸದರಿ ಪ್ರಮಾಣ ಪತ್ರವು ವ್ಯಾಲಿಡಿಟಿ ಅವಧಿ ಹೊಂದಿರತಕ್ಕದ್ದು. ವ್ಯಾಲಿಡಿಟಿ ಮುಗಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಪಕ್ಷದಲ್ಲಿ ಅಂತಹ ಅಭ್ಯರ್ಥಿಯನ್ನು ತಿರಸ್ಕರಿಸಲಾಗುವುದು.
- ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆ ಇಲ್ಲದಿರುವುದು ಹಾಗೂ ಫಲಿತಾಂಶಕ್ಕೆ ಕಾಯುತ್ತಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
- ಮೂಲ ದಾಖಲಾತಿಗಳ ಪರಿಶೀಲನೆ ನಂತರ ತಾತ್ಕಾಲಿಕ ಮತ್ತು ಅಂತಿಮ ಆಯ್ಕೆ ಪಟ್ಟಿಗೆ ಸಂಬಂಧಿಸಿದ ವಿವರಗಳನ್ನು https://chikkaballapur.nic.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
- ಈ ಗುತ್ತಿಗೆ ಆಧಾರದ ಸೇವೆಯ ಆಯ್ಕೆಯನ್ನು ನಿರ್ದಿಷ್ಟ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ ಅಭ್ಯರ್ಥಿಯು ಬೇಡಿಕೆಯ ಮೇಲೆ ಯಾವುದೇ ಸ್ಥಳಕ್ಕೆ ವರ್ಗಾವಣೆಗಾಗಲಿ/ಪರಸ್ಪರ ವರ್ಗಾವಣೆಯಾಗಲೀ ಅಥವಾ ನಿಯೋಜನೆಗಾಗಲೀ ಅವಕಾಶವಿರುವುದಿಲ್ಲ.
- ಕೋವಿಡ್-19 ಸಾಂಕ್ರಾಮಿಕದಡಿಯಲ್ಲಿ ಕರ್ತವ್ಯ ನಿರ್ವಹಿಸಿ ಎರಡು ವರ್ಷ ಪೂರೈಸಿದ ಅಭ್ಯರ್ಥಿಗಳಿಗೆ ಶೇಕಡಾ 4 ರಷ್ಟು ಒಂದೂವರೆ ವರ್ಷ ಪೂರೈಸಿದ ಅಭ್ಯರ್ಥಿಗಳಿಗೆ ಶೇಕಡಾ 3ರಷ್ಟು, ಒಂದು ವರ್ಷ ಪೂರೈಸಿದ ಅಭ್ಯರ್ಥಿಗಳಿಗೆ ಶೇಕಡಾ 2ರಷ್ಟು ಮತ್ತು 6 ತಿಂಗಳು ಪೂರೈಸಿದ ಅಭ್ಯರ್ಥಿಗಳಿಗೆ ಶೇಕಡಾ 1ರಷ್ಟು ಅಂಕಗಳನ್ನು ನೀಡಲಾಗುವುದು. ಈ ಶೇಕಡಾವನ್ನು ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯಲ್ಲಿ ಪಡೆದಿರುವ ಶೇಕಡಾವಾರು ಅಂಕಗಳನ್ನು ಒಟ್ಟುಗೂಡಿಸಿ, ಒಟ್ಟಾರೆ ಹೆಚ್ಚು ಅಂಕಗಳನ್ನು ಪಡೆದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
- ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರವನ್ನು ನೇಮಕಾತಿ ಸಮಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘವು ಮಾತ್ರ ಹೊಂದಿರುತ್ತದೆ.
- ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಕೆ.ಎಂ.ಸಿ ಮತ್ತು ಕೆ.ಎನ್.ಸಿ ಪ್ರಮಾಣ ಪತ್ರವನ್ನು ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು, ವ್ಯಾಲಿಡಿಟಿ ಮುಗಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಪಕ್ಷದಲ್ಲಿ ಅಂತಹ ಅಭ್ಯರ್ಥಿಯನ್ನು ತಿರಸ್ಕರಿಸಲಾಗುವುದು.

ಸಹಿ/-

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲೆ

ಪ್ರತಿಯನ್ನು:-

1. ಮಾನ್ಯ ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
3. ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲೆ ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
4. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮಾನ್ಯ ಮುಖ್ಯ ಆಡಳಿತಾಧಿಕಾರಿಗಳು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಜಿಲ್ಲಾ ನೋಡಲ್ ಅಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಉಪನಿರ್ದೇಶಕರು (ವೈದ್ಯಕೀಯ-1), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಉಪನಿರ್ದೇಶಕರು (ತಾಯಿ ಆರೋಗ್ಯ), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಜಿಲ್ಲಾ ಮಾಹಿತಿ ಮತ್ತು ತಂತ್ರಜ್ಞಾನ ಅಧಿಕಾರಿಗಳು, ಎನ್.ಐ.ಸಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ರವರಿಗೆ ಸಲ್ಲಿಸುತ್ತಾ ಜಿಲ್ಲಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
11. ಜಿಲ್ಲಾ ಶಸ್ತ್ರಚಿಕಿತ್ಸಕರು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿಗಾಗಿ ರವಾನಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
12. ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
13. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ ರವರ ಮಾಹಿತಿ ಹಾಗೂ ಅವಗಾಹನೆಗಾಗಿ ಸಲ್ಲಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
14. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು ಮತ್ತು ಎಲ್ಲಾ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿಗಾಗಿ ರವಾನಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.
15. ಕಚೇರಿ ಪ್ರತಿ.

18/01/2024.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಫ. ಚಿಕ್ಕಬಳ್ಳಾಪುರ ಜಿಲ್ಲೆ